ವಸತಿ ಯೋಜನೆಯ ಮನೆಗಳು

1395(891); ಶ್ರೀ ಮಧು ಬಂಗಾರಪ್ಪ. ಎಸ್

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಮಂಜೂರಾದ ಬಸವ ವಸತಿ ಯೋಜನೆ ಮನೆಗಳ ಕಾಮಗಾರಿ ಪೂರ್ಣಗೊಂಡಿದ್ದು, ಹಂತ ಹಂತವಾಗಿ ಜಿ.ಪಿ.ಎಸ್. ಮಾಡಿ ಅಪ್‌ಲೋಡ್ ಮಾಡಿದ ಮನೆಗಳ ಅನುದಾನ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನುದಾನ ಬಿಡುಗಡೆಯಾಗಿದೆಯೇ ಇಲ್ಲವೇ ಎಂಬುದನ್ನು ಅಧಿಕಾರಿಗಳು ಕ್ರಮವಾಗಿ ಪರಿಶೀಲಿಸುತ್ತಿದ್ದಾರೆಯೇ;

ಇ) ಈವರೆಗೂ ಎಷ್ಟು ಮನೆಗಳಿಗೆ ಪೂರ್ಣ ಪ್ರಮಾಣದಲ್ಲಿ ಅನುದಾನ ಬಿಡುಗಡೆಯಾಗಿದೆ; ಇನ್ನೆಷ್ಟು ಮನೆಗಳಿಗೆ ಬಿಡುಗಡೆಯಾಗಬೇಕಿದೆ. (ವಿವರ ನೀಡುವುದು)

ಈ) ಅನುದಾನವನ್ನು ಬಿಡುಗಡೆಗೊಳಿಸುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು; ಯಾವಾಗ ಬಿಡುಗಡೆಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಬಂದಿದೆ.

ಆದರೆ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯನ್ನು ಪರಿಶೀಲಿಸುವಾಗ ಈ ಕೆಳಕಂಡ ಕಾರಣಗಳಿಂದ 64829 ಫಲಾನುಭವಿಗಳನ್ನು ಅನರ್ಹರೆಂದು ತಡೆಹಿಡಿದು ಅನುದಾನ ಬಿಡುಗಡೆ ಮಾಡಿರುವುದಿಲ್ಲ. ವಿವರಗಳು ಇಂತಿವೆ:–

1. **ನಿಗದಿಪಡಿಸಿದ ಘಟಕವೆಚ್ಚ ಮೀರಿ ನಿರ್ಮಿಸಿದ ಮನೆ:**

ನಿಯಮಾನುಸಾರ ಸರ್ಕಾರವು ಪ್ರತಿ ಮನೆಗೆ ನೀಡುವ ಸಹಾಯಧನದ ಜೊತೆಗೆ ಫಲಾನುಭವಿಗಳ ಸ್ವಂತ ವಂತಿಕೆ ಹಣವನ್ನು ಉಪಯೋಗಿಸಿಕೊಂಡು ಗರಿಷ್ಟ 5 ಲಕ್ಷದವರೆಗೆ ಮನೆ ನಿರ್ಮಿಸಿಕೊಳ್ಳಲು ಅವಕಾಶ ನೀಡಿದೆ. ಆದರೆ ಕೆಲವು ಫಲಾನುಭವಿಗಳು ರೂ. 6.00 ರಿಂದ ರೂ.20.00 ಲಕ್ಷಕ್ಕೂ ಹೆಚ್ಚು ಅನುದಾನ ವಿನಿಯೋಗಿಸಿ ಮನೆ ನಿರ್ಮಿಸುತ್ತಿರುವ ಕಾರಣ, 7056 ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ.

2. **ಮನೆ ವಿಸ್ತರಣೆ:**

ವಾಸಕ್ಕೆ ಈಗಾಗಲೇ ಸ್ವಂತ ಮನೆ ಹೊಂದಿರುವ ಫಲಾನುಭವಿಯು ತನ್ನ ಮನೆಯನ್ನು ವಿಸ್ತರಣೆ ಮಾಡಿಕೊಳ್ಳುತ್ತಿರುವ 14106 ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ.

3. **ಹಳೇ ಮನೆ ಅಥವಾ ಹಂತವಾರು ಛಾಯಾಚಿತ್ರಗಳ ಅವಶ್ಯಕತೆ:**

ಸುಮಾರು ವರ್ಷದ ಹಿಂದೆ ನಿರ್ಮಿಸಿರುವ ಹಳೇ ಮನೆಗಳನ್ನು ಜಿಪಿಎಸ್‌ಗೆ ಅಳವಡಿಸಿರುವ ಕಾರಣ ಅಥವಾ ಹೊಸದಾಗಿ ಮನೆ ನಿರ್ಮಾಣದ ಬಗ್ಗೆ 4 ಹಂತದ ಜಿ.ಪಿ.ಎಸ್. ಛಾಯಾಚಿತ್ರಗಳನ್ನು ಅಳವಡಿಸದೆ, ಹಾಲಿ ಇರುವ ಮನೆಯನ್ನೇ ಜಿ.ಪಿ.ಎಸ್.ಗೆ ಅಳವಡಿಸಿರುವ ಕಾರಣ ಅಂತಹ 43016 ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ.

4. ವಸತಿಯೇತರ ಉದ್ದೇಶಕ್ಕಾಗಿ ನಿರ್ಮಿಸಿಕೊಂಡಿರುವುದು:

ನಿರ್ಮಿಸುತ್ತಿರುವ ಮನೆಯನ್ನು ವಾಸೇತರ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದಾಗಿ ಕಂಡು ಬಂದ 651 ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಅನುದಾನವನ್ನು ತಡೆಹಿಡಿಯಲಾಗಿದೆ.

ಆ) ಪರಿಶೀಲಿಸುತ್ತಿದ್ದಾರೆ.

ಇ) 2010–11ನೇ ಶ್ರೇಣಿಗಳಿಂದ ಬಸವ ವಸತಿ ಯೋಜನೆಯಡಿ ಭೌತಿಕ ಪ್ರಗತಿ ಮತ್ತು ಜಿ.ಪಿ.ಎಸ್. ಛಾಯಾಚಿತ್ರಗಳ ಆಧಾರದ ಮೇಲೆ ಒಟ್ಟು 678135 ಮನೆಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. 64829 ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಬೇಕಾಗಿದೆ.

ಈ) ನಿಗಮದ ಹಂತದಲ್ಲಿ ಜಿ.ಪಿ.ಎಸ್ ಛಾಯಾಚಿತ್ರಗಳನ್ನು ಆಧರಿಸಿ ಅನರ್ಹರನ್ನು ಗುರುತಿಸಲಾಗಿದ್ದು, ಒಂದು ವೇಳೆ ವಾಸ್ತವಿಕವಾಗಿ ನಿರ್ಮಾಣಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ / ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣದೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಡಳಿತವು ಆನ್‌ಲೈನ್ ಮೂಲಕ ನಿಗಮಕ್ಕೆ ಸಲ್ಲಿಸಿದಲ್ಲಿ, ಪರಿಶೀಲಿಸಿ, ಅರ್ಹರಿದ್ದಲ್ಲಿ ಅನುದಾನ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಅನವಟ್ಟಿ ಬಾಲಕಿಯರ ಪ್ರೌಢಶಾಲೆ ಉನ್ನತ ದರ್ಜೆಗೇರಿಸುವುದು

1396(892); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸೊರಬ ತಾಲ್ಲೂಕು ಅನವಟ್ಟಿಯಲ್ಲಿ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿಪೂರ್ವ ಕಾಲೇಜನ್ನಾಗಿ ಉನ್ನತ ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಶಾಲೆಯನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?